ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Saturday, 27th April 1974/Vaishaka 7, 1896 S.E.

The House met in the Assembly Chamber, Vidhana Soudha, at Nine of the Clock.

Madam SPEAKER (Smt. K. S. Nagarathnamma) in the Chair.

STARRED QUESTIONS

(to which oral answers were given)

TRANSFER OF REVENUE LAND TO FOREST LIST

18. Sri S. M. SHEERNALY CHANDRASEKHAR (Hosanagar).—

Will the Minister for Revenue be pleased to state:—

(*a*) whether there was an order from the Revenue Department to the Tahsildar, Hosanagar to surrender all the proposed forest land to the Forest Department, which is originally revenue land and later kept under proposed forest list;

(*b*) whether it has come to the notice of Government that the said order contravenes previous order which enjoins Government to keep some portion of land fit for cultivation in the Revenue list itself;

(*c*) whether the Minister is aware that he gave assurance and made a statement before this House while replying to a call attention motion tabled by me regarding the same problem to retain some lands which is fit for cultivation in the Revenue list itself;

(*d*) will the Minister be pleased to stick on to the original statement made before this House to solve this hurdle?

Sri N. HUTCHAMASTHY GOWDA (Minister for Revenue).—

(*a*) Government in their Order No. 32 LAD 62 dated 1st August 1964 and 6th July 1969 transferred an extent of 1,62,343 acres and 21 guntas of lands from Revenue Department to Forest Department. After a portion of the above extent was transferred

(SRI N. HUTCHAMASTHY GOWDA)

to Forest Department, Government in Revenue Department issued instructions to the Deputy Commissioner, Shimoga, not to operate on the said Orders. Later on, Government reconsidered the matter and restored the implementation of the Orders.

(*b*) No.

(*c*) Yes.

(*d*) Even now the policy of Government is not to transfer the lands which are fit for cultivation to the Forest Department.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಕಳೆದ ಆಸೆಂಬ್ಲಿ ಅಧಿವೇಶನದಲ್ಲಿ ನಾನು ಸರಕಾರದಲ್ಲಿ ಒಂದು ಗಮನಸೆಳೆಯುವ ಸೂಚನೆಯನ್ನು ಕಳುಹಿಸಿದಾಗ ಅದರಲ್ಲಿ ತಾವು ನುಮಾರು ಒಂದು ಲಕ್ಷ ಚಿಲ್ಲರೆ ಫಾರೆನ್ಸ್ ಭೂಮಿ ಇದ್ದು, ಅದು ಸಾಗುವಳಿಗೆ ಯೋಗ್ಯವಾಗಿದ್ದರೆ ಅಂತಹ ಭೂಮಿಯನ್ನು ರೆವೆನ್ಯೂ ಡಿಪಾರ್ಟುಮೆಂಟನವರೇ ಇಟ್ಟುಕೊಳ್ಳುವುದಕ್ಕೆ ಇಚ್ಛೆ ಇದೆ ಎಂದು ಹೇಳಿದ್ದಿರಿ. ಇದರ ಬಗ್ಗೆ ಅದೇಶ ಕೂಡ ಕಳುಹಿಸುತ್ತೇವೆಂದು ಹೇಳಿದ್ದಿರಿ. ಅಂತಹ ಆದೇಶ ಇದುವರೆಗೂ ಇಲ್ಲಿಗೆ ಬರಲಿಲ್ಲ ಎನ್ನುವುದು ನಿಜವೇ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಈ ವಿಷಯದಲ್ಲಿ ಆಗಿದಾಂಗೆ ಇಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಇದರಲ್ಲಿರುವ ಅನುಮಾನವನ್ನು ಪರಿಹರಿಸುವುದಕ್ಕೆ ತಮ್ಮ ಅಪ್ಪಣೆ ಪಡೆದು ಒಂದೆರಡು ವಿಷಯಗಳನ್ನು ವಿವರವಾಗಿ ಹೇಳಬೇಕಾಗಿದೆ. ಮೊಟ್ಟಮೊದಲು 1-8-1964 ರಲ್ಲಿ ಮತ್ತು 6-7-1965 ರಲ್ಲಿ ಸರಕಾರದ ಆರ್ಡರಾಗಿ ಅದರಲ್ಲಿ 1,62, 343 ಎಕರೆ 20 ಗುಂಟೆ ಭೂಮಿಯನ್ನು ಫಾರೆಸ್ಟ್ ಇಲಾಖೆಗೆ ಕೊಡಬೇಕೆಂದು ಆಜ್ಞೆಯಾಗಿತ್ತು. ಆದಾದ ಮೇಲೆ 93,413 ಎಕರೆಗಳನ್ನು ಮಾತ್ರ ಅರಣ್ಯ ಇಲಾಖೆಗೆ ಬಿಟ್ಟು ಕೊಡಬೇಕೆಂದು ಆಯಿತು. ಇದಾದ ಮೇಲೆ 1-8-1964ರಲ್ಲಿ ಮತ್ತು 6-7-1965ರಲ್ಲಿ ಆರ್ಡರಾಗಿದ್ದಂತೆ ಯಾವ ಲೆಮೀನನ್ನೂ ಫಾರೆನ್ಸ್ ಇಲಾಖೆಗೆ ರಿಲೀಸು ಮಾಡಬಾರದು ಎಂದಿಯಿತು. ಇದಾದ ಮೇಲೆ ರೆವೆನ್ಯೂ ಇಲಾಖೆಯವರು ಮತ್ತೆ ಒಂದು ಆದೇಶವನ್ನು 29-9-1972ರಲ್ಲಿ ಹೊರಡಿಸಿ ಅದರಲ್ಲಿ ರೆವೆನ್ಯೂ ಇಲಾಖೆ ಯಾವ ಜಮೀನನ್ನು ಕೊಡದೆ ಉಳಿಸಿಕೊಂಡಿತ್ತೋ ಆ ಆಜ್ಞೆಯಂತೆ ಮತ್ತೆ ಫಾರೆನ್ಸ್ ಇಲಾಖೆಗೆ ಅದನ್ನು ಕೊಡಬಾರದು ಎಂದು ಒಂದು ಆಜ್ಞೆಯಾಗಿತ್ತು. ಇದಾದ ಮೇಲೆ 7-12-1972ರಲ್ಲಿ ರೆವೆನ್ಯೂ ಇಲಾಖೆಯವರು ರೆವೆನ್ಯೂ ಕಮಿಷನರವರ ಕೈಚೆರಿಯಲ್ಲಿ ಒಂದು ಸಭೆ ಸೇರಿಸಿ ಇದರಲ್ಲಿ (ಸಿ) ಮತ್ತು (ಡಿ) ವರ್ಗಗಳಲ್ಲಿ ಯಾವ ಭೂಮಿ ಬರುತ್ತದೆ ಅದನ್ನು ಮಾತ್ರ ಅರಣ್ಯ ಇಲಾಖೆಗೆ ವರ್ಗಾಯಿಸಬೇಕು ಎಂದು ಆಯಿತು. ಅಷ್ಟೇ ಅಲ್ಲದೆ ಫಾರೆಸ್ಟ್ ಭೂಮಿಯಲ್ಲಿ ಎಷ್ಟು ಭೂಮಿ ಇತ್ತೋ ಅದರಲ್ಲಿ ಸ್ವಲ್ಪ ಭಾಗವನ್ನು ರೆವೆನ್ಯೂ ಇಲಾಖೆಗೆ ಕೊಡಬೇಕೆಂದೂ ಒಂದು ಆಜ್ಞೆಯಾಯಿತು. ಆದರೆ ಇದನ್ನು 29-9-1972ರಲ್ಲಿ ಕೊಡಕೂಡದು ಎಂದು ಆದೇಶ ಹೊರಡಿಸಿ ಅದನ್ನು ವಾಪಸು ತೆಗೆದುಕೊಳ್ಳಲಾಗಿದೆ. ಇದು ಇರತಕ್ಕ ಪರಿಸ್ಥಿತಿ. ಇತ್ತೀಚೆಗೆ ಉಳಿದಿರತಕ್ಕ ಜಮೀನಿನಲ್ಲಿ ಯಾವ ಜಮೀನು ವ್ಯವಸಾಯಕ್ಕೆ ಯೋಗ್ಯವಾಗಿದೆ, ಅಂತಹ ಜಮೀನನ್ನು ಫಾರೆಸ್ಟ್ ಇಲಾಖೆಗೆ ಕೊಡಕೂಡದು ಅದನ್ನು ಇಲ್ಲಿಯೇ ಉಳಿಸಬೇಕು ಎಂದು ಇದೆ. ಇದು ಇಲ್ಲಿನ ಪರಿಸ್ಥಿತಿ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ವಾಪಸು ರೆವೆನ್ಯೂ ಇಲಾಖೆಯವರು ವಹಿಸಿಕೊಳ್ಳಬೇಕೆಂದು ಆಜ್ಞೆ ಇತ್ತೀಚೆಗೆ ಆಗಿರುವುದು. ಆದರೆ ತಾವು ಇದೇ ಸಭೆಯಲ್ಲಿ ಕೊಟ್ಟ ಹೇಳಿಕೆಗೂ ಈಗ ಕೊಡುತ್ತಿರುವ ಹೇಳಿಕೆಗೂ ವ್ಯತ್ಯಾಸ ಬರುವುದಿಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಂತಹ ವ್ಯತ್ಯಾಸಗಳೇನಾಗುವುದಿಲ್ಲ. ಇದಕ್ಕೆ ನಾಲ್ಕು ಸರಕಾರದ ಆರ್ಡರುಗಳ ವಿವರಗಳನ್ನೂ ತಮಗೆ ಇಲ್ಲಿ ಹೇಳಿದ್ದೇನೆ. ಇದನ್ನು ನೋಡಿದರೆ ಯಾವ ವ್ಯತ್ಯಾಸಗಳೂ ಆಗುವುದಿಲ್ಲ.

---

†indicates that remarks or Speeches have not been revised by the member concerned.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಎರಡನೇ ಸರಕಾರವ ಆರ್ಡರನ್ನು ಕಳುಹಿಸಿ ಅದರಲ್ಲಿ ಸಾಗುವಳಿಗೆ ಯೋಗ್ಯವಾದ ಭೂಮಿಯನ್ನು ವಹಿಸಿಕೊಳ್ಳಬೇಕೆಂದು ಹೇಳಿದಿರಿ. ಇದು ಯಾವಾಗ ಹೊರಡಿಸಲಾಯಿತು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಕ್ಷಣ ಇದರ ತಾರೀಖು ಇಲ್ಲಿಲ್ಲದಿದ್ದರೂ ಇದರಲ್ಲಿ ಉಳಿಯತಕ್ಕ ಭೂಮಿ ಯಾವುದು (ಸಿ) ಮತ್ತು (ಡಿ) ವರ್ಗಕ್ಕೆ ಸೇರುತ್ತೋ ಅಂತಹ ಭೂಮಿಯನ್ನು ವರ್ಗಾಯಿಸಬೇಕೆಂದು ಆದೇಶ ಕೊಡಲಾಗಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—1954ರಲ್ಲಿ ಒಂದು ಇಲಾಖೆಯಿಂದ ಇನ್ನೊಂದು ಇಲಾಖೆಗೆ ಸೇರಿರುವ ಭೂಮಿಯನ್ನು ವರ್ಗಾಯಿಸಲಾಗುವುದಿಲ್ಲ ಎಂದು ಸರಕಾರದ ಆರ್ಡರಾಗಿತ್ತು. ಇದನ್ನು ಮತ್ತೆ ಫಾರೆಸ್ಟ್ ಇಲಾಖೆಯಿಂದ ವರ್ಗಾಯಿಸುವಾಗ ಹೆಚ್ಚು ಆಹಾರ ಬೆಳೆಯಬೇಕು ಎನ್ನುವ ಉದ್ದೇಶದಿಂದ ಜಾಸ್ತಿ ಉತ್ಪನ್ನವನು ಮಾಡಬಹುದು ಎಂದು ಕೆಲವು ಭೂಮಿಯನ್ನು ಸರಕಾರ ವರ್ಗಮಾಡಬಹುದು ಎಂದು ಆರ್ಡರಾಗಿತ್ತು. ಆದರೆ ಈಗ ಯಾವುದು ವ್ಯವಸಾಯಕ್ಕೆ ಯೋಗ್ಯವಾಗಿದೆಯೋ ಅಂತಹದನ್ನು ಮಾತ್ರ ವರ್ಗಮಾಡಬೇಕೆಂದು ಆರ್ಡರು ಮಾಡಿದೆ ಎಂದು ತಿಳಿಸುತ್ತೀರಿ. ಆದರೆ ಈಗ ಕೆಲವು ಜಮೀನನ್ನು ವಾಪಸು ತೆಗೆದುಕೊಳ್ಳುತ್ತೀರಿ ಎಂದು ಹೇಳುತ್ತೀರಿ. ಇದು ಒಂದಕ್ಕೊಂದು ವ್ಯತ್ಯಾಸವಾಗುವುದಿಲ್ಲವೇ ? ಹೀಗೆ ಬದಲಾಯಿಸಲು ಇದ್ದಂತಹ ಮೂಲ ಕಾರಣಗಳಾದರೂ ಏನು ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರಲ್ಲಿ ಅಂತಹ ಯಾವ ವ್ಯತ್ಯಾಸಗಳೂ ಇಲ್ಲ. ಹಿಂದೆ ಎಂದರೆ 1964-65ರಲ್ಲಿ ಆಗಿದ್ದ ಗವರ್ನಮೆಂಟು ಆರ್ಡರನ್ನು 29-9-1972ರಲ್ಲಿ ಬದಲಾವಣೆ ಮಾಡಲಾಗಿದೆ ಮತ್ತೆ 5-12-1973ರಲ್ಲಿ ಮತ್ತೊಂದು ಸರಕಾರವ ಆರ್ಡರನ್ನು ಹೊರಡಿಸಿ ಹಿಂದೆ ಏನು ಆರ್ಡರಾಗಿತ್ತೋ ಅದನ್ನು ಬದಲಾಯಿಸಿ ಇದರಂತೆ ವಾಪಸು ತೆಗೆದುಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ. ಇದರಲ್ಲಿ ಯಾವುದು (ಸಿ) ಮತ್ತು (ಡಿ) ವರ್ಗಕ್ಕೆ ಬರುತ್ತದೋ ಅಂತಹ ಭೂಮಿ ಮಾತ್ರ ವ್ಯವಸಾಯಕ್ಕೆ ಅರ್ಹವಾಗಿದ್ದರೆ ಅದನ್ನು ವಾಪಸು ಅರಣ್ಯ ಇಲಾಖೆಯಿಂದ ಪಡೆಯುಬಹುದು. ವ್ಯವಸಾಯಕ್ಕೆ ತೆಗೆದುಕೊಳ್ಳುವುದರ ಬಗ್ಗೆ ಇದರಲ್ಲಿರುವ ಆರ್ಡರು ಸ್ಪಷ್ಟವಾಗಿದೆ ಇದರಲ್ಲೇನೂ ವ್ಯತ್ಯಾಸವಾಗುವುದಿಲ್ಲ.

INSTALLATION AND ENERGISATION OF PUMPSETS IN CHIKODI TALUK.

253. Sri P. P. HEGRE (Chikodi).—

Will the Minister for Public Works and Electricity be pleased to state :—

(*a*) the names of the villages in Chikodi Taluk and the number of pumpsets installed for irrigation purposes in each of those villages and the number of pumpsets which have been energised during the year 1973-74 (upto end of January 1974);

(*b*) the number of pumpsets still to be energised and the time required for it;

(*c*) whether Government would give priority in energising these pumpsets installed for irrigation purposes and help increase agricultural operation in the Taluk ?